**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,**
**ಶ್ರೀರಂಗಪಟ್ಟಣ.**

ಸಿ.ಸಿ.ಃ 221/2019

ಸಿ. ಡಬ್ಲ್ಯು: 02
ಪಿ. ಡಬ್ಲ್ಯು: 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ವಿಜಯ ಕುಮಾರ |
| ತಂದೆ/ಪತಿಯ ಹೆಸರು | ಃ | ಹೋಬಳೇಗೌಡ |
| ವಯಸ್ಸು | ಃ | 49 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ಬೆಳಗೊಳ ಗ್ರಾಮ |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 05.08.2024

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನನಗೆ ಚಾಸಾ-1 ರವರ ಪರಿಚಯ ಇರುತ್ತದೆ. ನಾನು ಆರೋಪಿಯನ್ನು ನೋಡಿರುವುದಿಲ್ಲ. ಹಾಲಿನ ವಾಹನ ಕರ್ಪಮ್ಮ ರವರಿಗೆ ಡಿಕ್ಕಿ ಹೊಡೆದಿರುತ್ತದೆಂದು ನಾವು ಅಲ್ಲಿಗೆ ಹೋಗಿರುತ್ತೇವೆ. ನಂತರ ಆಕೆಯನ್ನು ನಾವು ಕರೆದುಕೊಂಡು ಬೆಳಗೊಳದಲ್ಲಿರುವ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ಅಲ್ಲಿಂದ ಹೆಚ್ಚಿನ ಚಿಕಿತ್ಸೆಗಾಗಿ ಆಕೆಯನ್ನು ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗ ಮಧ್ಯೆದಲ್ಲಿ ಆಕೆ ಮೃತ ಪಟ್ಟಿರುತ್ತಾರೆ. ಅದೇ ದಿನ ಸಂಜೆ ಪೋಲೀಸರು ಸ್ಥಳ ಮಹಜರ ಮಾಡಿರುತ್ತಾರೆ. ಈ ಮಾಹಿತಿ ಹೊರತುಪಡಿಸಿ ನನಗೆ ಬೇರೆ ವಿಚಾರ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತೀಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು).

**ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ**

ದಿಃ 01.02.2019 ರಂದು ಮಧ್ಯಾಹ್ನ 12.30 ಸಮಯದಲ್ಲಿ ಈ ಅಪಘಾತವಾಗಿರುತ್ತದೆ ಎಂದರೆ ಸರಿ. ಆಗ ನಂದಿನಿ ಪಾರ್ಲರ್ ಮುಂಭಾಗ ಕೆ.ಆರ್.ಸಾಗರ - ಮೈಸೂರ ರಸ್ತೆಯ ಫುಟ್ ಬಾತ್ ಬಳಿ ಕರ್ಪಮ್ಮ ರವರು ಕುಳಿತಿದ್ದ ಸಮಯದಲ್ಲಿ ಬೊಲೋರೋ ನಂದಿನಿ ಹಾಲಿನ ವಾಹನವನ್ನು ಅದರ ಚಾಲಕನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ

ಮಾಡಿಕೊಂಡು ಬಂದು ಸದರಿ ಕರ್ಪಮ್ಮರವರಿಗೆ ಡಿಕ್ಕಿ ಪಡಿಸಿರುತ್ತಾನೆ ಎಂಬ ಪ್ರಶ್ನೆಗೆ ಸಾಕ್ಷಿಯು ಅಪಘಾತವಾಗಿ ಸದ್ದು ಬಂದ ಸಂದರ್ಭದಲ್ಲಿ ನಾವು ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ವಾಹನ ಸಂಃ ಕೆಎ-55-4072 ಎಂದರೆ ನನಗೆ ಗೊತ್ತಿಲ್ಲ. ನಂತರ ನಾನು ಹೋಗಿ ನೋಡಿದಾಗ ಕರ್ಪಮ್ಮ ರವರಿಗೆ ರಕ್ತಗಾಯವಾಗಿತ್ತು ಎಂದರೆ ಸರಿ. ನಂತರ ಈ ಘಟನೆ ಸಂಬಂಧ ಚಾಸಾ.1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿಗೆ ತೋರಿಸಿ ಆ ದಿನ ಬೋಲೋರೊ ವಾಹನವನ್ನು ಚಾಲನೆ ಮಾಡುತ್ತಿದ್ದ ವ್ಯಕ್ತಿ ಇತನೇ ಎಂಬ ಪ್ರಶ್ನೆಗೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಅಪಘಾತವು ಆರೋಪಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪೊಲೀಸರು ಕರ್ಪಮ್ಮ ರವರ ಶವದ ಮಹಜರ್ ಅನ್ನು ನನ್ನ ಸಮಕ್ಷಮ ಮಾಡಿರುತ್ತಾರೆ ಎಂದರೆ ಸರಿ. ನಾನು ನನ್ನಹೇಳಿಕೆಯಲ್ಲಿ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆಂದು ತಿಳಿಸುತ್ತೇನೆ ಎಂದರೆ ಸಾಕ್ಷಿಯು ಇಲ್ಲವೆಂದು ನುಡಿಯುತ್ತಾರೆ. ನನಗೆ ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಅಪಘಾತವನ್ನು ನೋಡಿದ್ದರೂ ಸಹ ಇಲ್ಲವೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು : ಆರೋಪಿ ಪರ ವಕೀಲರಿಂದ</u>**

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.